# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** **ಗಳಿಕೆ ರಜೆಯ ಗರಿಷ್ಠ ಮಿತಿ, ಗಳಿಕೆ ರಜೆ ಅಧ್ಯರ್ಪಿಸಿ ರಜೆ ನಗದೀಕರಣ ಸೌಲಭ್ಯ ಹಾಗು ನಿವೃತ್ತಿ ಸಮಯದಲ್ಲಿ ಪಡೆಯಬಹುದಾದ ರಜೆ ನಗದೀಕರಣಕ್ಕಾಗಿ ಅಧ್ಯರ್ಪಿಸುವ ಗಳಿಕೆ ರಜೆಯ ಗರಿಷ್ಠ ಮಿತಿ–ಪರಿಷ್ಕರಿಸುವ ಬಗ್ಗೆ.**

****

**ಪ್ರಸ್ತಾವನೆ:**

ಪ್ರಸ್ತುತ ಜಾರಿಯಲ್ಲಿರುವ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 112(3)ನ್ನು ನಿಯಮ 113(5)ರೊಂದಿಗೆ ಓದಲಾದಂತೆ, ಪ್ರತಿ ಹಿಂದಿನ ವರ್ಷದ ಕೊನೆಯಲ್ಲಿ ಸರ್ಕಾರಿ ನೌಕರನ ಲೆಕ್ಕದಲ್ಲಿರುವ ರಜೆಯನ್ನು ಮುಂದಿನ ಅರ್ಧವರ್ಷಕ್ಕೆ ಮುಂದುವರೆಸತಕ್ಕದ್ದಾಗಿದ್ದು ಹಾಗೆ ಮುಂದುವರೆಸಿದ ರಜೆ ಮತ್ತು ಅರ್ಧವರ್ಷದ ರಜೆ ಇವೆರಡೂ ಸೇರಿ 240 ದಿನಗಳ ಮಿತಿಗೊಳಪಟ್ಟು ಸಂಗ್ರಹಣೆಗೆ ಅವಕಾಶವಿರುತ್ತದೆ ಹಾಗೂ ನಿಯಮ 118 **ಎ** (1)ರನ್ವಯ ವಯೋನಿವೃತ್ತಿಗೊಳ್ಳುವ ಸರ್ಕಾರಿ ನೌಕರನು ನಿವೃತ್ತಿ ದಿನಾಂಕದಂದು ಆತನ ಲೆಕ್ಕದಲ್ಲಿರುವ ಗಳಿಕೆ ರಜೆಯ ಗರಿಷ್ಠ 240 ದಿನಗಳ ಮಿತಿಗೊಳಪಟ್ಟು ರಜಾ ವೇತನಕ್ಕೆ ಸಮನಾದ ನಗದು ಮಂಜೂರು ಮಾಡಲು ಅವಕಾಶವಿರುತ್ತದೆ. ಮುಂದುವರೆದು ನಿಯಮ 118(2)ರನ್ವಯ ಸರ್ಕಾರಿ ನೌಕರನು ಎರಡು ವರ್ಷಗಳ ಬ್ಲಾಕ್ ಅವಧಿಯಲ್ಲಿ ಆತನ ಜಮೆಯಲ್ಲಿರುವ 30 ದಿನಗಳಿಗೆ ಮೀರದಂತೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ, ರಜಾ ವೇತನಕ್ಕೆ ಸಮನಾದ ನಗದು ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತದೆ.

2011 ರ ಅಧಿಕಾರಿ ವೇತನ ಸಮಿತಿಯು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 113(5)ರನ್ವಯ ಗಳಿಕೆ ರಜೆಯ ಸಂಗ್ರಹಣೆಯ ಗರಿಷ್ಟ ಮಿತಿ 240 ದಿನಗಳನ್ನು 300 ದಿನಗಳಿಗೆ ಹೆಚ್ಚಿಸಲು ಮತ್ತು ನಿಯಮ 118 **ಎ** (1)ರನ್ವಯ ವಯೋನಿವೃತ್ತನಾಗುವ ಸರ್ಕಾರಿ ನೌಕರನ ನಿವೃತ್ತಿ ಸಮಯದಲ್ಲಿ ನಗದೀಕರಣಕ್ಕಾಗಿ ಅಧ್ಯರ್ಪಿಸುವ ಗಳಿಕೆ ರಜೆಯ ಗರಿಷ್ಟ ಮಿತಿಯನ್ನು 240 ದಿನಗಳಿಂದ 300 ದಿನಗಳವರೆಗೆ ಹೆಚ್ಚಿಸಲು ಹಾಗೂ ನಿಯಮ 118(2)ರನ್ವಯ ಪ್ರತಿ ವರ್ಷವೂ ಸರ್ಕಾರಿ ನೌಕರನ ಜಮೆಯಲ್ಲಿರುವ ರಜೆಯಲ್ಲಿ 15 ದಿನಗಳಿಗೆ ಮೀರದಂತೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಸೌಲಭ್ಯ ನೀಡಲು ಶಿಫಾರಸ್ಸು ಮಾಡಿದ್ದು, ಈ ಶಿಫಾರಸ್ಸುಗಳನ್ನು ಸರ್ಕಾರವು ಅಂಗೀಕರಿಸಿದೆ ಮತ್ತು ಅದರಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಆಇ 5 ಸೇನಿಸೇ 2012,ಬೆಂಗಳೂರು, ದಿನಾಂಕ: 14.06.2012.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 112(3)ಮತ್ತು 113(5)ರನ್ವಯ ಪ್ರತಿ ಅರ್ಧ ವರ್ಷಗಳಲ್ಲಿ ಜಮೆ ಮಾಡುವ ಗಳಿಕೆ ರಜೆ ಮತ್ತು ಶೇಖರವಾದ ಗಳಿಕೆ ರಜೆಯು ಸೇರಿದಂತೆ ರಜಾ ಸಂಗ್ರಹಣೆಯ ಗರಿಷ್ಟ ಮಿತಿಯನ್ನು ದಿನಾಂಕ **01.04.2012ರಿಂದ** ಜಾರಿಗೆ ಬರುವಂತೆ 240 ದಿನಗಳ ಬದಲಾಗಿ **300 ದಿನಗಳಿಗೆ** ಹೆಚ್ಚಿಸಲಾಗಿದೆ.

**2 ಕ.ನಾ.ಸೇ.ನಿಯಮಾವಳಿ,** ನಿಯಮ 118ಎ(1)ರನ್ವಯ ವಯೋನಿವೃತ್ತನಾಗುವ ಸರ್ಕಾರಿ ನೌಕರನ ನಿವೃತ್ತಿ ಸಮಯದಲ್ಲಿ ನಗಧೀಕರಣಕ್ಕಾಗಿ ಅಧ್ಯರ್ಪಿಸುವ ಗಳಿಕೆ ರಜೆಯ ಗರಿಷ್ಟ ಮಿತಿಯನ್ನು **ದಿ:1–4–2012 ರಿಂದ** ಜಾರಿಗೆ ಬರುವಂತೆ 240 ದಿನಗಳಿಂದ **300 ದಿನಗಳವರೆಗೆ** ಹೆಚ್ಚಿಸಲಾಗಿದೆ.

3 **ಕ.ನಾ.ಸೇ.ನಿಯಮಾವಳಿ,** ನಿಯಮ 118(2) ಸೌಲಭ್ಯ ಪಡೆಯುವ ಬದಲಾಗಿ, ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ (ಆಯಾ ವರ್ಷದ ಜನವರಿ 1ರಿಂದ ಡಿಸೆಂಬರ್ 31ರ ಒಳಗೆ) 15 ದಿನಗಳಿಗೆ ಮೀರದ ಗಳಿಕೆ ರಜೆಯನ್ನು ಆಧ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗದೀಕರಣ ಪಡೆಯಬಹುದಾದ ಸೌಲಭ್ಯವನ್ನು ದಿನಾಂಕ **01.01.2013ರಿಂದ** ಜಾರಿಗೆ ಬರುವಂತೆ ಆದೇಶಿಸಿದೆ.

4 **ಕ.ನಾ.ಸೇ.ನಿಯಮಾವಳಿ,** ನಿಯಮ 112, 113, 118 ಮತ್ತು 118ಎ ರಲ್ಲಿ ಗಳಿಕೆ ರಜೆ ಮತ್ತು ಗಳಿಕೆ ರಜೆ ನಗದೀಕರಣ ನಿಯಂತ್ರಣಕ್ಕೆ ಸಂಬಂಧಿಸಿದಂತೆ ವಿಧಿಸಿರುವ ಇತರೇ ಷರತ್ತುಗಳು ಮುಂದುವರೆಯುತ್ತವೆ.

5 ಈ ಆದೇಶವು ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಸಂಸ್ಥೆಗಳ ನೌಕರರಿಗೂ ಅನ್ವಯಿಸುತ್ತದೆ.

6 ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 112, 113, 118 ಮತ್ತು 118ಎ ಗಳಿಗೆ ಅವಶ್ಯಕ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,



**(ಕೆ.ಎಸ್.ಗೋಪಾಲಕೃಷ್ಣ)**
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು)

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 100 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು/ಅಪರಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗ.
6. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
8. ಮಹಾಲೇಖಪಾಲರು (ಕಂದಾಯ ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕಪರಿಶೋಧನೆ), ಬೆಂಗಳೂರು.

9. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು
10. ರಿಜಿಸ್ಟ್ರಾರ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
12, ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
14, ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತು, ಬೆಂಗಳೂರು.
15. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು
16. ಪ್ರಾಜೆಕ್ಟ್ ಆಫೀಸರ್,ಹೆಚ್.ಆರ್.ಎಂ.ಎಸ್, ಕೊಠಡಿ ಸಂಖ್ಯೆ:145–A, ಬಹುಮಹಡಿಗಳ ಕಟ್ಟಡ, ಬೆಂಗಳೂರು
17. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
18. ಅಧ್ಯಕ್ಷರು,ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
19. ಕರ್ನಾಟಕ ಸರ್ಕಾರಿ ಸಚಿವಾಲಯ ಗ್ರಂಥಾಲಯ; ವಿಧಾನ ಮಂಡಲದ ಗ್ರಂಥಾಲಯ.
20. ವಾರಪತ್ರ/ಶಾಖೆಯ ರಕ್ಷಾ ಕಡತ.

[ಕ್ರಮ ಸಂಖ್ಯೆ:7 ರಿಂದ 14 ರವರೆಗೆ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ].

ಕರ್ನಾಟಕ ಸರ್ಕಾರದ ಅಧಿಕೃತ ಅಂತರ್ಜಾಲ ತಾಣ **www.finance.kar.nic.in** ವೀಕ್ಷಿಸಿ.

# PROCEEDINGS OF GOVERNMENT OF KARNATAKA

**Sub**: Maximum limit on accumulation of EL and maximum limit of EL for encashment at the time of retirement as well as benefit of surrender of EL for encashment purpose. – revision reg.

**Preamble**:

As per Rule 112(3) read with Rule 113(5) of K.C.S.Rs., there is a provision to carry forward the leave at the credit of a Government servant at the close of the previous year to the next half year, subject to the condition that the accumulation of such leave on account of carry forward plus the credit for the half year does not exceed 240 days. Rule 118 A (1) of K.C.S.Rs. provides for sanction of cash equivalent to the leave salary for EL, if any, at the credit on the date of retirement of a Government servant , who retires on superannuation, subject to a maximum of 240 days. Further, as per the existing provisions under Rule 118(2) of K.C.S.Rs., a Government servant may surrender EL not exceeding 30 days out of the leave at his credit once in a block period of two years and receive a cash equivalent of the leave salary.

The Official Pay Committee 2011 has recommended to enhance the maximum limit of EL from 240 days to 300 days as per Rule 113(5) and also to enhance the maximum limit of EL that can be surrendered as per Rule 118 A(1) for encashment at the time of retirement from the existing 240 days to 300 days as well as to allow the Government servant to surrender EL not exceeding 15 days out of the leave at his credit every year for the purpose of encashment as per Rule 118(2) of K.C.S.Rs. These recommendations have been accepted by the Government and accordingly the following order.

## GOVERNMENT ORDER NO:FD 05 SRS 2012, BANGALORE, DATED:14.06.2012

The maximum limit on accumulation of EL on account of carry forward plus the credit for the half year as per Rule 112(3) and Rule 113(5) of K.C.S.Rs. has been enhanced from 240 days to 300 days w.e.f. 01.04.2012.

2. The maximum limit of EL that can be surrendered for encashment at the time of retirement as per Rule 118 A(1) of K.C.S.Rs. has been enhanced from 240 days to 300 days w.e.f. 01.04.2012.

3. Instead of surrender of EL not exceeding 30 days in a block period of two years for encashment purpose, it is ordered that EL not exceeding 15 days every calendar year (from1st January within 31st December of the respective year) may be surrendered and receive a cash equivalent of the leave salary as per Rule 118(2) of K.C.S.Rs. w.e.f. 01.01.2013.

4. All other conditions relating to EL and encashment of EL as stipulated under Rule 112,113,118 and 118A of K.C.S.Rs. shall continue to apply.

5. The order is applicable to the employees of institutions receiving Grant-in-Aid from Government.

6. Necessary amendments will be issued to Rule 112,113,118 and 118A of K.C.S.Rs. separately.

By Order and in the name of the
Governor of Karnataka,

**(K.S. GOPALAKRISHNA)**
Joint Secretary to Government
Finance Department (Services).

The Compiler, Karnataka Gazette for publication in the next issue of the gazette and to supply 100 copies to Finance Department.

**<u>Copy to</u>:**

1. The Chief Secretary/ Additional Chief Secretaries to Government.
2. Principal Secretaries/Secretaries to Government.
3. The Heads of Departments.
4. The Deputy Commissioners of Districts.
5. The Regional Commissioners, angalore/Mysore/Belgaum/Gulbarga.
6. The Chief Executive Officers of Zilla Panchayaths.
7. The Principal Accountant General (Civil & Commercial Audit), Karnataka, Bangalore
8. The Accountant General (Revenue Receipts & Public
9. Works & Forest Audit), Karnataka, Bangalore
10. Accountant General (Accounts & Entitlement), Karnataka, Bangalore.
11. The Registrar, High Court of Karnataka, Bangalore.
12. The Registrar, Karnataka Lokayuktha, Bangalore.
13. The Registrar, Karnataka Administrative Tribunal, Bangalore.
14. The Secretary, Public Service Commission, Bangalore.
15. The Secretary, Karnataka Legislative Assembly / Legislative Council, Bangalore.
16. Treasury Officer, State Huzur Treasury/District Treasuries.

} with a covering letter

17. Project Officer, H.R.M.S., Room No.145-A, M.S.Building, Bangalore.
18. All sections of Karnataka Government Secretariat.
19. President, Karnataka State Government Employees' Association, Cubbon Park, Bangalore.
20. Karnataka Government Secretariat Library/Legislature Library.
21. Weekly Gazette/Section Guard File.

Visit: Karnataka Government Official Website **www.finance.kar.nic.in.**